2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ಚಿಕ್ಕಮಗಳೂರು

<u>ಸತ್ರ ಮೊಕದ್ದಮೆ ನಂ: 102/2018</u>

| | | |
|---|---|---|
| ಸಾಕ್ಷಿದಾರರ ಹೆಸರು | - ಡಾ.ವಾಣಿ ಎನ್. | ಪಿಡಬ್ಲೂ - 23 |
| ಗಂಡನ ಹೆಸರು | - ಎ.ಮುರಳಿ | ಹೆಚ್ಚುವರಿ ಸಾಕ್ಷಿ |
| ವಯಸ್ಸು | - 48 ವರ್ಷ | |
| ಉದ್ಯೋಗ | - ಅಸಿಸ್ಟೆಂಟ್ ಡೈರೆಕ್ಟರ್, ಎಫ್.ಎಸ್.ಎಲ್. ಬೆಂಗಳೂರು | |
| ವಾಸ ಸ್ಥಳ | - ಬೆಂಗಳೂರು | |

ವಿಸಿ ಮೂಲಕ ಸಾಕ್ಷಿಯ ವಿಚಾರಣೆ

ದಿನಾಂಕ: **19.07.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-</u>

1. ನಾನು ಕಳೆದ ಇಪ್ಪತ್ತು ವರ್ಷಗಳಿಂದ ನಾನು ಬೆಂಗಳೂರು ಎಫ್.ಎಸ್.ಎಲ್.ನಲ್ಲಿ ಬೇರೆ ಬೇರೆ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸಿದ್ದೇನೆ.
2. ಕೋಆರ್ಡಿನೇಟರಾಗಿ ರಮೇಶ್ ಕೆ., ಸೀನಿಯರ್ ಸೈಂಟಿಫಿಕ್ ಆಫೀಸರ್, ಎಫ್.ಎಸ್.ಎಲ್., ಬೆಂಗಳೂರು ಇವರು ಹಾಜರಿರುತ್ತಾರೆ.
3. ದಿ: 26.06.2018 ರಂದು ಕಡೂರು ಠಾಣಾ ಮೊಕದ್ದಮೆ 125/2018 ರಲ್ಲಿ ಪಿಸಿ 331 ರವರು ಒಂದು ಸೀಲಾದ ವಸ್ತುವನ್ನು ಪರೀಕ್ಷೆಗಾಗಿ ನಮ್ಮ ಕಚೇರಿಗೆ ಸಲ್ಲಿಸಿದ್ದರು. ಆ ವಸ್ತು ಜಿ.ಹೆಚ್.ಕೆ. ಎಂದು ಸೀಲಾಗಿದ್ದು ಮಾದರಿ ಸೀಲಿನೊಂದಿಗೆ ಹೋಲಿಕೆಯಾಗುತ್ತಿತ್ತು. ಸೀಲು ಸುಸ್ಥಿತಿಯಲ್ಲಿತ್ತು. ನಾನು ಅದೇ ದಿನ ಸದರಿ ವಸ್ತುವನ್ನು ಪರೀಕ್ಷೆಗಾಗಿ ಪಡೆದಿರುತ್ತೇನೆ.

4. ದಿಃ 08.04.2020 ರಂದು ನಾನು ಪರೀಕ್ಷೆಗೆ ಒಳಪಡಿಸಿದ್ದೇನೆ. ನನಗೆ ಕಳುಹಿಸಿದ ವಸ್ತುವು ಕಪ್ಪು ಬಣ್ಣದಿಂದ ಕೂಡಿದ ಚರ್ಮದ ತುಂಡಾಗಿತ್ತು. ನಾನು ಸದರಿ ವಸ್ತುವನ್ನು ರಾಸಾಯನಿಕ ಪರೀಕ್ಷೆಗೆ ಒಳಪಡಿಸಿದಾಗ ನನಗೆ ಅದರಲ್ಲಿ ಯಾವುದೇ ಬಗೆಯ ಇಂಧನದ ಅಂಶ ಇರುವುದು ಕಂಡುಬಂದಿರುವುದಿಲ್ಲ. ನಾನು ಸದರಿ ವಸ್ತುವನ್ನು ಪರೀಕ್ಷಿಸಿ ನೀಡಿದ ವರದಿಯನ್ನು ಈಗ ನೋಡುತ್ತಿದ್ದು ನಿಪಿ.56 ಎಂದು ಸಾಕ್ಷಿಯ ಸಹಿಯನ್ನು ನಿಪಿ.56(ಎ) ಎಂದು ಗುರುತಿಸಲಾಯಿತು. ಸ್ಯಾಂಪಲ್ ಸೀಲನ್ನು ನಿಪಿ.57 ಎಂದು ಸಾಕ್ಷಿಯ ಸಹಿಯನ್ನು ನಿಪಿ.57(ಎ) ಎಂದು ಗುರುತಿಸಲಾಯಿತು. ಸದರಿ ವಸ್ತುವನ್ನು ಪರೀಕ್ಷೆಯ ನಂತರ ಸೀಲು ಮಾಡಿ ಕಳುಹಿಸಿರುತ್ತೇನೆ.

5. ಸಾಮಾನ್ಯವಾಗಿ ಇಂಧನ ಅಂಶಗಳು ವಸ್ತುವಿನಲ್ಲಿ ಸೇರಿರುವುದು ವಸ್ತುವನ್ನು ಸರಿಯಾಗಿ ಸಂರಕ್ಷಿಸದೆ ಇಡದ ಸಂದರ್ಭದಲ್ಲಿ ಆವಿಯಾಗಿ ಹೋಗುವ ಸಾದ್ಯತೆ ಇರುತ್ತದೆ. ವ್ಯಕ್ತಿಯ ದೇಹದ ಮೇಲೆ ಬಿದ್ದ ಇಂಧನದ ವಸ್ತು ಸುಟ್ಟುಹೋದಲ್ಲಿ ರಾಸಾಯನಿಕ ಪರೀಕ್ಷೆಯಲ್ಲಿ ಪತ್ತೆಯಾಗದೇ ಇರಬಹುದು.

<u>ಪಾಟೀ ಸವಾಲುಃ ಶ್ರೀ.ಕೆ.ವಿ.ವೈ., ವಕೀಲರಿಂದ ಆರೋಪಿತರ ಪರವಾಗಿ</u>

6. ಇಂಧನ ಇರುವ ಅಂಶದ ವಸ್ತುಗಳನ್ನು ಪರೀಕ್ಷೆಗಾಗಿ ಕಳುಹಿಸಿದಲ್ಲಿ ಪರೀಕ್ಷೆಯನ್ನು ಆದಷ್ಟು ಬೇಗೆ ಮಾಡತಕ್ಕದ್ದು ಎಂದರೆ ನಿಜ. ನನಗೆ ಪರೀಕ್ಷೆಗಾಗಿ ಕಳುಹಿಸಿದ ವಸ್ತು ಸುಟ್ಟು ಹೋಗಿರುವ ಸ್ಥಿತಿ ಯಲ್ಲಿತ್ತು. ಪರೀಕ್ಷೆಗಾಗಿ ಕಳುಹಿಸಿದ ವಸ್ತು ಸುಟ್ಟು ಹೋಗಿರುವ ಸ್ಥಿತಿಯಲ್ಲಿತ್ತು ಎಂದು ನಿಪಿ.56 ರಲ್ಲಿ ನಮೂದಿಸಿಲ್ಲ. ಚರ್ಮ ದೇಹದಿಂದ ಬೇರ್ಪಡಿಸಿದಾಗ 5 ರಿಂದ 10 ಗಂಟೆಯ ನಂತರ ಅದರ ಬಣ್ಣ ಬದಲಾಗುತ್ತದೆ ಎಂದರೆ ನಿಜ.

7. ನನಗೆ ಕಳುಹಿಸಿದ ವಸ್ತು ಪರೀಕ್ಷಿಸುವಲ್ಲಿ ಸುಮಾರು ಒಂದು ವರ್ಷ ಹತ್ತು ತಿಂಗಳಿನಷ್ಟು ವಿಳಂಬವಾಗಿದೆ. ನಾನು ಪರೀಕ್ಷಿಸಿದ ವಸ್ತುವನ್ನು ವಾಪಾಸ್ಸು ಕಳುಹಿಸಿರುವುದು ದಿಃ 11.09.2020 ರಂದು ಆಗಿದೆ. ನಿಪಿ.56 ಕ್ಕೆ ನಮ್ಮ

S.C.102/2018 PW.23

ಸಂಸ್ಥೆಯ ನಿರ್ದೇಶಕರು ದಿನಾಂಕ ನನಗೆ ಹೇಳಲಾಗುವುದಿಲ್ಲ. ಸೂಕ್ತ ಪರೀಕ್ಷೆ ನಡೆಸದೇ ಪೋಲೀಸರ ಕೋರಿಕೆ ಮೇರೆಗೆ ಸುಳ್ಳು ವರದಿ ನೀಡಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ